# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.36/2014**

**ದೋ.ಸಾ. : 08 ಫ್ರಾ.ಸಾ. : 10**

| | | |
|---|---|---|
| ಸಾಕ್ಷಿಯ ಹೆಸರು | : | ಭೀಮಾ ಸುಬ್ರಮಣ್ಯ |
| ತಂದೆಯ ಹೆಸರು | : | ಸುಬ್ರಮಣ್ಯ |
| ವಯಸ್ಸು | : | 61 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ರಾಜೀವನಗರ, ಕದ್ರಾ |

**ದಿನಾಂಕಃ 03-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 15-02-2014 ರಂದು ಕದ್ರಾ ಪೊಲೀಸರು ನನ್ನನ್ನು ಕಾರವಾರದ ಸಿವಿಲ್ ಆಸ್ಪತ್ರೆಯ ಶವಗಾರಕ್ಕೆ ಪಂಚನಾಮೆಗಾಗಿ ಕರೆಸಿದ್ದರು. ನಾನು ಅಲ್ಲಿಗೆ ಹೋದಾಗ ಚಾಸಾ-9 ರವರು ಹಾಗೂ ಚಾಸಾ-30 ರವರು ಸಹ ಇದ್ದರು. ಶವಗಾರದಲ್ಲಿ ವೇಲು ರವರ ಶವ ಇತ್ತು. ಅವರ ಮೈ ಮೇಲೆ ಅಂಗಿ, ಲುಂಗಿ ಮತ್ತು ಉಡದಾರ ಇತ್ತು. ಎಡ ಕುತ್ತಿಗೆಯಿಂದ ಬಲ ಮೀಸೆಯ ವರೆಗೆ ಕತ್ತಿಯಿಂದ ಕಡಿದ ಗಾಯವಾಗಿತ್ತು, ಗದ್ದದ ಹತ್ತಿರ ಗಾಯವಾಗಿ, ಎಲುಬು ಕಾಣುತ್ತಿತ್ತು, ಎಡ ಕಿವಿಯ ಮೇಲೆ ಕತ್ತಿಯಿಂದ ಕಡಿದ ಗಾಯವಾಗಿತ್ತು, ಬಲ ಕಿವಿಯ ಮೇಲೂ ಸಹ ಗಾಯವಾಗಿತ್ತು, ಹಣೆಯಿಂದ ಹಿಂಬದಿಯ ತಲೆಯ ವರೆಗೆ ಕತ್ತಿಯಿಂದ ಕಡಿದ ಗಾಯವಾಗಿತ್ತು, ಎಡ ಗೈ ಹೆಬ್ಬೆರಳಿನ ಮಧ್ಯದ ಭಾಗದಿಂದ ಮೊಣಕೈ ವರೆಗೆ ಕತ್ತಿಯಿಂದ ಕಡಿದ ಗಾಯವಾಗಿತ್ತು. ಅಲ್ಲಿ ಪೊಲೀಸರು ಪಂಚನಾಮೆ ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು ಹಾಗೂ ಪೋಟೋಗಳನ್ನು ತೆಗೆದರು. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-36 ಎಂದು, ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ 5 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-37 ರಿಂದ ನಿಪಿ-41 ಎಂದು ಗುರುತಿಸಲಾಯಿತು.

2. ಆ ನಂತರ ಶವಗಾರದಲ್ಲಿ ಮೂರೂ ಶವಗಳ ಅಂದರೆ ವೇಲು ಇಲ್ಲನ್ ಗುಡಿ, ಆತನ ಮಕ್ಕಳಾದ ಸತ್ಯನಾರಾಯಣ ಮತ್ತು ಅಶ್ವಿನಿಯವರ ಶವ ಪರೀಕ್ಷೆಯನ್ನು ಮಾಡಿ, ಸದರಿ ಮೂರೂ ಶವಗಳನ್ನು ನಮಗೆ ಹಸ್ತಾಂತರಿಸಿ, ಸ್ವೀಕೃತಿಗಳನ್ನು ಪಡೆದಿರುತ್ತಾರೆ. ಸದರಿ ಸ್ವೀಕೃತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–42 ರಿಂದ ನಿಪಿ–44 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ–42(ಎ) ರಿಂದ ನಿಪಿ–44(ಎ) ಎಂದು ಗುರುತಿಸಲಾಯಿತು. ಮೃತ ವೇಲುವಿನ ಮೈ ಮೇಲೆ ಇದ್ದ ಅಂಗಿ ಮತ್ತು ಲುಂಗಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು–19 ಮತ್ತು 20 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

3. ಪಂಚನಾಮೆ ಸಮಯದಲ್ಲಿ ಪೋಟೊ ತೆಗೆಯಲು ಪೊಲೀಸರು ಇದೇ ಸ್ಥಿತಿಯಲ್ಲಿ ನಿಲ್ಲುವಂತೆ ಹೇಳಿರುತ್ತಾರೆ ಎಂದರೆ ಸರಿ. ಸದರಿ ಪೋಟೋಗಳ ಮೇಲೆ ದಿನಾಂಕ ಮತ್ತು ಸಮಯ ಕಾಣಿಸುತ್ತಿಲ್ಲ ಎಂದರೆ ಸರಿ. ಶವಗಳನ್ನು ಪಡೆಯುವ ಸಮಯದಲ್ಲಿ ನನ್ನ ಕಡೆಯಿಂದ 3 ದಾಖಲೆಗಳ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಅವುಗಳ ಮೇಲೆ ಏನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಿಪಿ–36 ಶವ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ಶವ ಪಂಚನಾಮೆಯ ಸಮಯದಲ್ಲಿ ಮಾಡಿರುತ್ತೇನೆ ಹಾಗೂ ನಿಪಿ–42 ರಿಂದ 44 ರಲ್ಲಿರುವ ಸಹಿಗಳನ್ನು ಶವಗಳನ್ನು ಸ್ವೀಕರಿಸುವ ಸಮಯದಲ್ಲಿ ಮಾಡಿರುತ್ತೇನೆ. ನಿಪಿ–36 ಶವ ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಪೊಲೀಸರು ಸಹಿ ಮಾಡು ಎಂದು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ–36 ರನ್ನು ಬರೆದವರ ಹೆಸರು ಗೊತ್ತಿಲ್ಲ ಆದರೆ ಪೊಲೀಸರು ಬರೆದಿರುತ್ತಾರೆ. ಚಾಸಾ–9 ರವರು ಯಾವಾಗ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶವ ಪಂಚನಾಮೆಯ ಕಾಲಕ್ಕೆ ನಾನು ಹಾಜರು ಇರುವುದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಸಮಕ್ಷಮ ಯಾವುದೇ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಶವ ಪಂಚನಾಮೆ, ಸ್ವೀಕೃತಿಗಳು ಹಾಗೂ ಪೋಟೋಗಳನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ